೧೪ ಬೆಳೆ ನಷ್ಟ ಪ್ರಕರಣಗಳಲ್ಲಿ ರೂ. ೬,೩೨೦-೦೦ ಪರಿಹಾರ ಧನವನ್ನು ಮತ್ತು ಒಂದು ಮಾನವ ಪ್ರಾಣಹಾನಿ ಪ್ರಕರಣದಲ್ಲಿ ರೂ. ೫,೦೦೦-೦೦ ಪರಿಹಾರ ಧನ ಹಾಗೂ ಒಂದು ಅಂಗವಿಹೀನ ಪ್ರಕರಣದಲ್ಲಿ ರೂ ೨೦೨೦-೦೦ ಪರಿಹಾರ ಧನ ನೀಡಲಾಗಿದೆ.

ಮೈಸೂರು ಜಿಲ್ಲೆಯಲ್ಲಿ ೧೯೮೭ನೇ ಜನವರಿಯಿಂದ ಡಿಸೆಂಬರ್ ಕೊನೆಯವರೆಗೆ ಒಟ್ಟು ೧೫೭ ಜಾನುವಾರು ನಷ್ಟ ಪ್ರಕರಣಗಳಲ್ಲಿ ರೂಪಾಯಿ. ೩೪.೭೨೭-೦೦ ಪರಿಹಾರ ಧನವನ್ನು ೬೬೭ ಬೆಳೆಹಾನಿ ಪ್ರಕರಣಗಳಲ್ಲಿ ರೂ. ೨.೦೨,೯೭೯-೦೦ ಪರಿಹಾರ ಧನವನ್ನು ಹಾಗೂ ಪ್ರಾಣಹಾನಿಯಾದ ೫ ಪ್ರಕರಗಳಲ್ಲಿ ರೂ. ೨೫,೦೦೦-೦೦ ಪರಿಹಾರ ಧನವನ್ನು ಮತ್ತು ೩ ಗಾಯಗೊಂಡ ಪ್ರಕರಣಗಳಲ್ಲಿ ರೂ. ೨,೦೦೦-೦೦ ಪರಿಹಾರ ಧನವನ್ನು ಕೊಡಲಾಗಿದೆ.

ಇದಲ್ಲದೆ, ಹೆಗ್ಗಡದೇವನ ಕೋಟೆ ಮತ್ತು ಸರಗೂರು ಪ್ರದೇಶದಲ್ಲಿ ೩೩ ಕಿ.ಮೀ. ಉದ್ದದ ಆನೆ ಕಂದಕವನ್ನು ತೋಡಿದ್ದು ಆನೆಗಳನ್ನು ಊರುಗಳಿಗೆ ಹಾಗೂ ಖಾಸಗಿ ಜಮೀನುಗಳಿಗೆ ನುಗ್ಗದಂತೆ ಹಿಮ್ಮೆಟ್ಟಿಸಲು ಆನೆ ಬೆದರಿಕಾ ದಳಗಳನ್ನು ನೇಮಿಸಲಾಗಿದೆ. ಇದಕ್ಕೆ ಬೇಕಾದ ಮದ್ದು, ಗುಂಡು ಮತ್ತು ಪಟಾಕಿಗಳನ್ನು ಸಹ ಒದಗಿಸಲಾಗಿದೆ.

ಬಹುತೇಕ ಪ್ರಕರಣಗಳಲ್ಲಿ ನೊಂದವರು ಅಗತ್ಯ ಮಾಹಿತಿಯನ್ನು ಒದಗಿಸಿದಲ್ಲಿ ವಿಳಂಬ ಮಾಡದೇ ಪರಿಹಾರ ಧನ ನೀಡಲಾಗುತ್ತಿದೆ.

19. ಬೈಂದೂರಿನಲ್ಲಿ ವಿದ್ಯುತ್ ಸಬ್ ಸ್ಟೇಷನನ್ನು ಸ್ಥಾಪಿಸುವುದು.

೧೨-೦೦ ಮಧ್ಯಾಹ್ನ

ಶ್ರೀ ಜಿ.ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಕ್ಷೇತ್ರದಲ್ಲಿ ವಿದ್ಯುತ್ತಿನ ವೈಫಲ್ಯ, ಆಡಳಿತದ ಶೈಥಲ್ಯವನ್ನು ತೋರಿಸುತ್ತದೆ. 'ಕರೆಂಟು' ಕನಸಿನ ಗಂಟಾಗಿದೆ. ಮುಂಜಾನೆ ೬ ಗಂಟೆಯಿಂದ ಅಪರಾಹ್ನ ೨ ಗಂಟೆಯವರೆಗೆ ತನಕ ಪವರ್ ಟ್. ಅಪರಾಹ್ನ ೨ ಗಂಟೆಯಿಂದ ರಾತ್ರಿ ೯ ಗಂಟೆತನಕ 'ಓಲ್ಟೇಜ್ ಡೌನ್' ಆಗಿ ಮೋಟಾರುಗಳು ಚಲಿಸುವುದಿಲ್ಲ. ಸಂಜೆ ದೀಪಗಳು 'ಕ್ಯಾಂಡಲ್'ಗಳಷ್ಟೇ ಬೆಳಕು ನೀಡುತ್ತವೆ. ಕಂಬದಕೋಣೆ ತನಕ ವಿದ್ಯುತ್ ಪೂರೈಸುವ ಭಟ್ಕಳ ಫೀಡರ್‌ನಲ್ಲಿ ಪ್ರತಿ ೧೦ ಅಥವಾ ೧೫ ನಿಮಿಷಕ್ಕೊಮ್ಮೆ ಲೈನ್ ಟ್ರಿಪ್ ಆಗುತ್ತಿದೆ. ಬೈಂದೂರಿಗೆ ೨ ತಿಂಗಳ ಹಿಂದೆ ೧೧ ಕೆ.ವಿ. ಫೀಡರ್ ಚಾರ್ಜ್ ಮಾಡಿದ್ದರೂ, ವಿದ್ಯುತ್ ಪೂರೈಕೆ ಮಾಡುತ್ತಿಲ್ಲ. ಕಾರಣ, ಅದಕ್ಕೆ ಬೇಕಾದ, ಎ.ಬಿ. ಸ್ವಿಚ್ ಹಾಕಿಲ್ಲವೆಂದು ತಿಳಿದುಬಂದಿದೆ. ಇದಕ್ಕೆ ಇನ್ನೆಷ್ಟು ತಿಂಗಳು ಬೇಕಾದೀತು ? ಲೈನ್ ಟ್ರಿಪ್ ಆಗದಂತೆ ನೋಡಲು ಸಾಧ್ಯವಿಲ್ಲವೆ ? ಈ ಭಾಗದ ರೈತರ, ಚಿಕ್ಕ ಉದ್ದಿಮೆದಾರರ ಗತಿ ಏನು ? ಬೇಸಾಯಕ್ಕೆ ನೀರುಣಿಸುವ ಮೋಟರ್‌ಗಳಿರುವ ರೈತರು, ಅಕ್ಕಿಮಿಲ್ಲು ಎಣ್ಣೆಗಾಣ, ಹೆಂಚಿನ ಉದ್ದಿಮೆ, ವರ್ಕ್‌ಷಾಪ್ ಇತ್ಯಾದಿ ನಡೆಸುವವರು—ಇವರ ಲೈಫೇ ಟ್ರಿಪ್ ಆಗುವ ದುರಂತ ಸ್ಥಿತಿ ಬಂದಿದೆ. ಈ ಲೈನ್ ಟ್ರಿಪ್‌ನಿಂದಾಗಿ ಭಟ್ಕಳದಿಂದ ಹೊನ್ನಾವರತನಕ ಇರುವಂತಹ ಇಂಡಸ್ಟ್ರಿಯಲ್ ಲೈನನ್ನು ಕುಂದಾಪುರದಿಂದ ಬೈಂದೂರು ತನಕ ಕೊಡಬಾರದೇಕೆ ? ಬೇರೆ ಪುರಸಭಾ ವಲಯಗಳಲ್ಲಿ ಪವರ್ ಕಟ್ ಇಲ್ಲದಿರುವಾಗ ಬೈಂದೂರು ಪುರಸಭಾ ಪ್ರದೇಶದಲ್ಲಿ ಮಾತ್ರ ಕಡಿತವೇಕೆ ? ಕಳೆದ ವರ್ಷ ಮಾನ್ಯ ಸಚಿವರು ಇದೇ ಸದನದಲ್ಲಿ ಆಶ್ವಾಸನೆ ಇತ್ತಂತೆ ಇದೇ ೧೯೮೮ರ ಮಾರ್ಚಿ ಅಂತ್ಯ ಗೊಳಗೆ ಬೈಂದೂರಿನಲ್ಲಿ ಸಬ್ ಸ್ಟೇಶನ್ ಸ್ಥಾಪಿಸಿ ಕಾರ್ಯಾರಂಭಿಸಲಾಗುವುದೇ ಎಂಬ ಕುರಿತು ಸ್ಪಷ್ಟೀಕರಣ ನೀಡಬೇಕಾಗಿ ಕೋರುತ್ತೇನೆ. ಈ ಕ್ಷೇತ್ರದ ಜನರನ್ನು ದ್ವಿತೀಯವೂ ಅಲ್ಲ, ತೃತೀಯ ದರ್ಜೆ ಪ್ರಜೆಗಳಂತೆ ನೋಡಬೇಡಿ ಎಂದು ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಆಚಾರ್‌ರವರ ಕಳಕಳಿ ಅರ್ಥವಾಗಿದೆ. ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಸ್ವಲ್ಪ ಒತ್ತಡದ ಸಮಸ್ಯೆ. ಒತ್ತಡ ಅಂದರೆ ಓಲ್ಟೇಜ್ ಒತ್ತಡ, ಇವರ ಒತ್ತಡ ಅಲ್ಲ. ಇವರ ಒತ್ತಡ ಸಾಕಷ್ಟು ಇದೆ. ಅಲ್ಲಿ ಓಲ್ಟೇಜ್ ಅಲ್ಲಿ ಓಲ್ಟೇಜ್ ಕಡಿಮೆಯಾಗಿದೆ. ಅದರ ಬಗ್ಗೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಮೊದಲು ಹಾಲಿ ಇರತಕ್ಕ ೧೧ ಕೆವಿ. ಲೈನನ್ನು ೩೩ ಕೆವಿ ಲೈನನ್ನಾಗಿ ಪರಿವರ್ತನೆ ಮಾಡಬೇಕೆಂಬ ಯೋಜನೆ ಇತ್ತು. ಅದನ್ನು ಬಿಟ್ಟು ನಿಮ್ಮ ಆಸೆಯಂತೆ ಕುಂದಾಪುರದಿಂದ ಬೈಂದೂರುವರೆಗೆ ೩೩ ಕೆವಿ. ಲೈನನ್ನು ಎಳೆದು

ಹೊಸ ಸಬ್ ಸ್ಟೇಷನ್ ಹಾಕಬೇಕೆಂಬುದು ವಿದ್ಯುಚ್ಛಕ್ತಿ ಮಂಡಲಿಯ ಯೋಜನೆ. ಈಗಾಗಲೇ ಸರ್ವೆ ಕೆಲಸ ಮುಗಿದಿದ್ದು ಪ್ರಿಲಿಮಿನರಿ ವರ್ಕ್ಸ್ ಮುಗಿದೆ. ಆದರ ಪ್ರಾರಂಭ ಸಧ್ಯದಲ್ಲಿಯೇ ಆಗುತ್ತದೆ. ಎಬಿ. ಸ್ವಿಚ್ ಇಲ್ಲದೆ ಕರೆಂಟ್ ಸಪ್ಲೈ ಆಗುತ್ತಿಲ್ಲ ಎಂಬುದು ನಿಜ. ಇದಕ್ಕೆ ಬೇಕಾದಂತಹ ಸ್ವಿಚ್‌ಗಳು ಜಪಾನ್‌ನಿಂದ ಬಂದಿವೆ. ಆದರಲ್ಲಿ ಎರಡು ಸ್ವಿಚ್‌ಗಳನ್ನು ತಕ್ಷಣ ಅಲ್ಲಿಗೆ ಕಳುಹಿಸಿ ಹೆಚ್ಚಿದರೆ ೧೫ ದಿನಗಳೊಳಗೆ ಕೆವಿ. ಲೈನನ್ನು ಚಾರ್ಜ್ ಮಾಡಿದರೆ ನಿವಂಗೆ ಇರತಕ್ಕ ಸಮಸ್ಯೆ ಪರಿಹಾರವಾಗಂತ್ತದೆ. ನಾವು ಲೈನ್ ಟ್ರಿಪ್ ಮಾಡುವ ಕೆಲಸಕ್ಕೆ ಹೋಗಂವುದಿಲ್ಲ ದುರುಪಯೋಗ ಮಾಡಿಕೊಳ್ಳಿವುದಕ್ಕೆ ಹೋದರೆ ಲೈನ್ ಟ್ರಿಪ್ ಆಗುತ್ತದೆ. ಸದುಪಯೋಗ ಮಾಡಿಕೊಂಡರೆ ಆಗುವುದಿಲ್ಲ. ಆದಷ್ಟು ಎಚ್ಚರಿಕೆವಹಿಸಿ ೧೫ ದಿನಗಳಲ್ಲಿ ಅಲ್ಪಸ್ವಲ್ಪ ಪರಿಹಾರ ಒದಗಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

೨೦. ಶಿಕಾರಿಪುರದಲ್ಲಿ ಭಾಗ್ಯಜ್ಯೋತಿ ಯೋಜನೆಯನ್ವಯ ೫೦ ಸಾವಿರ ಫಲಾನುಭವಿಗಳನ್ನು ಗುರುತಿಸುವುದು

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ)·—ಸನ್ಮಾನ್ಯ ಅಧ್ಯಕ್ಷರೆ, ೧೯೮೭-೮೮ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಭಾಗ್ಯಜ್ಯೋತಿ ದೀಪದ ಯೋಜನೆ ಅನ್ವಯ ಕೇವಲ ೨೫ ಸಾವಿರ ಫಲಾನುಭವಿಗಳನ್ನು ಗುರುತಿಸಬೇಕೆಂದು ವಿದ್ಯುಚ್ಛಕ್ತಿ ಇಲಾಖೆಯಿಂದ ಆದೇಶ ಹೋಗಿದ್ದು ಈ ಹಿಂದೆ ೧೯೮೬-೮೭ನೇ ಸಾಲಿನಲ್ಲಿ ೫೦ ಸಾವಿರ ಫಲಾನುಭವಿಗಳಿಗೆ ಭಾಗ್ಯಜ್ಯೋತಿ ಸೌಲಭ್ಯ ಒದಗಿಸಿದ್ದು ರಾಜ್ಯಪಾಲರ ಭಾಷಣದಲ್ಲಿ ಸಹ ಭಾಗ್ಯಜ್ಯೋತಿ ದೀಪದ ವ್ಯವಸ್ಥೆಗೆ ಹೆಚ್ಚು ಆದ್ಯತೆ ಕೊಡುವುದಾಗಿ ತಿಳಿಸಿರುವ ಕಾರಣ ಈಗ ಮಂಜೂರು ಮಾಡಿರುವ ೨೫ ಸಾವಿರ ಫಲಾನುಭವಿಗಳ ಬದಲು ೫೦ ಸಾವಿರ ಫಲಾನುಭವಿಗಳನ್ನು ಗುರುತಿಸಿ ರಾಜ್ಯದ ಶಿಕಾರಿಪುರ ಜನತೆಗೆ ಅನುಕೂಲ ಮಾಡಿಕೊಡಂವ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಖಾತೆ ರಾಜ್ಯ ಮಂತ್ರಿ),—ಮಾನ್ಯ ಅಧ್ಯಕ್ಷರೆ, ಹಿಂದಿನ ಎರಡು ಮೂರು ವರ್ಷಗಳಲ್ಲಿ ಅತ್ಯಂತ ಉತ್ಸಾಹದಿಂದ ಹೆಚ್ಚಿನ ಜನರಿಗೆ ಅಂದರೆ ೫೦ ಸಾವಿರ ಜನರಿಗೆ ಭಾಗ್ಯಜ್ಯೋತಿ ಯೋಜನೆಯನ್ವಯ ವಿದ್ಯುಚ್ಛಕ್ತಿ ಒದಗಿಸಿರುವುದು ನಿಜ. ಈ ವರ್ಷ ಆ ಪ್ರಮಾಣವನ್ನು ೨೫ ಸಾವಿರಕ್ಕೆ ಇಳಿಸಿದ್ದೇವೆ. ಕಾರಣ ಇಷ್ಟು ಮಾಡಿದರೂ ಕೂಡ ಫಲಾನುಭವಿಗಳನ್ನು ಗುರುತಂ ಮಾಡಿ ಕನೆಕ್ಷನ್ ಕೊಡುವುದಕ್ಕೆ ಆಗುತ್ತಿಲ್ಲ. ಇದಕ್ಕೆ ಕಾರಣ ಇಷ್ಟೆ. ಫಲಾನುಭವಿಗಳನ್ನು ಗುರುತಿಸತಕ್ಕ ನಿಯಮದಲ್ಲಿ ಬದಲಾವಣೆಯಾಗಿದೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳು ಈಗ ಬಂದಿರುವುದರಿಂದ ಮಂಡಲ ಪಂಚಾಯಿತಿಯವರು ಜಿಲ್ಲಾ ಪರಿಷತ್ತಿಗೆ ಫಲಾನುಭವಿಗಳನ್ನು ತಿಳಿಸಿ ಅವರು ವಿದ್ಯುಚ್ಛಕ್ತಿ ಮಂಡಲಿಗೆ ಪಟ್ಟಿಯನ್ನು ಕೊಡಬೇಕಾಗಿದೆ. ಅನೇಕ ಕಡೆಯಿಂದ ಪಟ್ಟಿ ಬಂದಿಲ್ಲ. ಅವರಿಗೆ ಒತ್ತಾಯ ಮಾಡಿದ್ದೇವೆ. ಆದರೂ ಮಾರ್ಚಿಯೊಳಗೆ ಈ ಗುರಿಯನ್ನು ಮೀರುತ್ತೇವೆ. ಗುರಿ ಮೀರಿ ಹೆಚ್ಚು ಕೆಲಸವನ್ನು ಮಾಡುವುದಕ್ಕೆ ತಯಾರಿದ್ದರೂ ಫಲಾನುಭವಿಗಳ ಪಟ್ಟಿ ಬರುತ್ತಿಲ್ಲ. ಫಲಾನುಭವಿಗಳನ್ನು ಗುರುತು ಮಾಡುವಾಗ ಇವರು ಹೇಳಿದ್ದು ಮಾಡಬೇಕೇ ಅವರು ಹೇಳಿದ್ದು ಮಾಡಬೇಕೇ ಎಂದು ಸಮಸ್ಯೆಗಳು ಬರಬಹುದು. ಫಲಾನುಭವಿಗಳನ್ನು ಗುರುತು ಮಾಡಿ ಬೇಗ ಕೊಟ್ಟರೆ ಗಂರಿ ಮೀರಿ ಸಾಧನೆಯನ್ನು ಮಾಡುವುದಕ್ಕೆ ಸಿದ್ಧರಿದ್ದೇವೆ ಎಂದಂ ಹೇಳುವುದಕ್ಕೆ ಬಯಸುತ್ತೇನೆ.

೨೧. ಚಿಕ್ಕನಾಯ್ಕನಹಳ್ಳಿ, ಮತಿಘಟ್ಟ ಮತ್ತು ದೊಡ್ಡಣಗೆರೆ, ಹುಳಿಯಾರ ರಸ್ತೆಯನ್ನು ರಿಪೇರಿ ಮಾಡಿಸುವುದು

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯ್ಕನಹಳ್ಳಿ),—ನನ್ನ ಕ್ಷೇತ್ರವಾದ ಚಿಕ್ಕನಾಯಂಕನಹಳ್ಳಿ ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ, ಚಿಕ್ಕನಾಯಕನಹಳ್ಳಿಯಿಂದ ಮತಿಘಟ್ಟ ಮತ್ತು ದೊಡ್ಡಣಗೆರೆ ರಸ್ತೆ ಹುಳಿಯೂರಿನಿಂದ ತಿಪಟೂರು ಬಿದರೇಗಂಡಿ ರಸ್ತೆಗಳು ಹಾಳಾಗಿ ಹೋಗಿ ಯಾವುದೇ ವಾಹನಗಳು ಜನ ಜಾನುವಾರುಗಳು ಸಂಚರಿಸಲು ಯೋಗ್ಯವಾಗಿಲ್ಲ. ಸೈಕಲ್, ಮೋಟಾರ್ ಸೈಕಲ್‌ಗಳಂತೂ ಚಲಿಸಲು ಸಾಧ್ಯವೇ ಇಲ್ಲ. ಈಗ್ಗೆ ಮೂರು ವರ್ಷಗಳಿಂದ ಒಂದೇ ಸವನೆ ಸರಕಾರದ